ಕನ್ನಡದಲ್ಲಿ ಪ್ರತಿ ಸಾಹಿತ್ಯ ಪಂಥದವರೂ ತಮ್ಮ ಹಿಂದಿನ ಪಂಥದವರ ಸಾಹಿತ್ಯವನ್ನು 'ಬೂಸಾ' ಶಬ್ದ ಬಳಸದೆಯೂ ಟೀಕಿಸುತ್ತ ಬಂದಿರುವರು. ಶರಣರು ವೇದಶಾಸ್ತ್ರಗಳನ್ನು, ಹರಿಹರ ರಾಜಕೇಂದ್ರಿತ ಕಾವ್ಯವನ್ನು ಹೀಗೇ ಕಟುವಾಗಿ ನಿರಾಕರಿಸಿದರು. ನಿರ್ದಿಷ್ಟ ಸ್ವರೂಪದ ಸಾಹಿತ್ಯದ ನಿರಾಕರಣೆಯಲ್ಲಿ ನಿರಾಕರಿಸದವರ ಸಾಹಿತ್ಯಿಕ ಪರಿಕಲ್ಪನೆ ಮಾತ್ರವಲ್ಲ, ಸಮಾಜ ಮತ್ತು ರಾಜಕಾರಣದ ತತ್ತ್ವಗಳೂ ನಿರತವಾಗಿರುತ್ತವೆ. ಒಕ್ಕೂಟದ ಭಾಷಣದಲ್ಲಿ ಸಾವಿರ ವರ್ಷಗಳ ಕನ್ನಡ ವಾಙ್ಮಯದಲ್ಲಿ 'ಮೂರುನಾಲ್ಕು', 'ಏಳೆಂಟು' ಕವಿಗಳನ್ನು ಮಾತ್ರ 'ಸಮರ್ಥರು' ಎಂದು, ಉಳಿದವರನ್ನು ಬೂಸಾ ಎಂದು ಕುವೆಂಪು ಆತ್ಯಂತಿಕವಾಗಿ ವ್ಯಾಖ್ಯಾನಿಸುತ್ತಾರೆ. ಅವರ ಅಭಿಪ್ರಾಯವನ್ನು ಪೂರ್ಣವಾಗಿ ಒಪ್ಪುವುದು ಕಷ್ಟ. ಕ್ಲಾಸಿಕಲ್ ಪ್ರಜ್ಞೆಯ ಅವರು ವಚನ, ಕೀರ್ತನೆ, ತತ್ತ್ವಪದ, ಜನಪದ ಸಾಹಿತ್ಯ ಹಾಗೂ ವಿವಿಧ ಶಾಸ್ತ್ರಗ್ರಂಥಗಳನ್ನು ಸಾಹಿತ್ಯವೆಂದು ಕಡೆವರೆಗೂ ಪರಿಗಣಿಸಲಿಲ್ಲ. ಆದರೆ, ಕಲಾತ್ಮಕ ಸಾಹಿತ್ಯ ಪ್ರಜ್ಞೆಯವರು ಕಡೆಗಣಿಸಿದ ಅನೇಕ ಪಠ್ಯಗಳನ್ನು ಸಾಂಸ್ಕೃತಿಕ ಪಠ್ಯವಾಗಿ ಪರಿಗಣಿಸಿ ಈಗ ಕನ್ನಡ ವಿಮರ್ಶೆ ಕಾಳಜಿಯಲ್ಲಿ ಚರ್ಚಿಸುತ್ತಿದೆ. ಒಂದು ಕಾಲಕ್ಕೆ ಬೂಸಾ ಅನಿಸಿದ್ದು ಇನ್ನೊಂದು ಕಾಲಕ್ಕೆ ಹಾಗಲ್ಲವೆಂದು ಅನಿಸಬಹುದು. ಹೀಗಾಗಿ ಯಾರಾದರೂ ನಿರ್ದಿಷ್ಟ ಸಾಹಿತ್ಯವನ್ನು ಕಳಪೆ ಅಥವಾ ಶ್ರೇಷ್ಠವೆಂದರೆ, ಅದನ್ನು ಮಾಲ್ಯಮಾಪನ ಮಾಡಿದ ಮಾನದಂಡ ಯಾವುದು ಎಂಬ ಪ್ರಶ್ನೆಯನ್ನೂ ಕೇಳಿಕೊಳ್ಳಬೇಕಾಗುತ್ತದೆ. ಯಾವುದೇ ಮೌಲ್ಯಮಾಪನವೂ ನಿರ್ದಿಷ್ಟ ದೃಷ್ಟಿಕೋನದ ಫಲವೆಂದೂ, ಅದು ಸಾರ್ವತ್ರಿಕ ಸತ್ಯವಾಗಬೇಕಿಲ್ಲ ಎಂದೂ ತಿಳಿಯಬೇಕಿದೆ.

ಮಹತ್ವದ ಸಂಗತಿಯೆಂದರೆ, ತಮ್ಮ ಕೃತಿಯ ಮಾರಾಟ ಜನಪ್ರಿಯತೆ ಪ್ರಶಸ್ತಿಗಳ ಆಚೆ, ಕಲೆ ಮತ್ತು ಜೀವನದೃಷ್ಟಿಯಿಂದ ತಾವು ಬರೆದಿರುವುದರಲ್ಲಿ ಎಷ್ಟು ಪ್ರಮಾಣದ ಬೂಸಾ ಇದೆ ಎಂದು ಲೇಖಕರಾದವರು ಸ್ವತಃ ಪ್ರಶ್ನಿಸಿಕೊಳ್ಳುವುದು. ಈ ನಿಷ್ಠುರತೆಯಿದ್ದಾಗ ಹಿಂದಿನದಕ್ಕಿಂತ ಎತ್ತರವಾದುದನ್ನು ಸೃಷ್ಟಿಸುವ ಹೊಣೆಗಾರಿಕೆ ಮತ್ತು ಛಲಗಳು ಹುಟ್ಟುತ್ತವೆ. ಈ ಸ್ವವಿಮರ್ಶನ ಪ್ರಜ್ಞೆಯು, ಯಾವುದೇ ನಾಗರಿಕ ಸಮಾಜವು ತನ್ನ ರಾಜಕಾರಣ, ಸಾಹಿತ್ಯ, ಕಲೆ, ಸಂಸ್ಕೃತಿ, ಧರ್ಮಗಳನ್ನು ಸ್ವಮೌಲ್ಯಮಾಪನಕ್ಕೆ ಒಡ್ಡಿಕೊಳ್ಳುತ್ತಲೇ ಇರಬೇಕಾದ ಆತ್ಮಶೋಧಕ ಸಂಗತಿ ಕೂಡ ಆಗಿದೆ.

**ರಹಮತ್ ತರೀಕೆರೆ**

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ, ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕ ನಾಥಪಂಥ', 'ಕರ್ನಾಟಕದ ಸೂಫಿಗಳು', 'ಕರ್ನಾಟಕ ಗುರುಪಂಥ' ಅವರ ಪ್ರಮುಖ ಪುಸ್ತಕಗಳು. ಅವರ ಲಲಿತ ಪ್ರಬಂಧಗಳ ಸಂಕಲನ 'ಹಿತ್ತಲ ಜಗತ್ತು'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.